## ನುಡಿಮಲ್ಲಿಗೆ

ನೀನು ನಿನ್ನ ದೇಹದ ಮೇಲೆ ಧರಿಸಿರುವ ಆಭರಣಗಳಿಗಿಂತಲೂ ಹೆಚ್ಚಿನದು ಮುಖದಲ್ಲಿ ಧರಿಸಿರುವ ಮಂದಹಾಸ

■ ಮೂರೋ

## ಕಹಿ ಮಾತ್ರೆಗಳು



ಅನೇಕ ವಿಧದ ದಾನಗಳಲ್ಲಿ ರಕ್ತದಾನವೂ ಒಂದಾಗಿದೆ. ರಕ್ತದಾನವು ಒಂದು ಪುಣ್ಯ ಕಾರ್ಯ. ರಕ್ತನೀಡುವುದರಿಂದಮತ್ತೆಹೆಚ್ಚಾಗುತ್ತದೆ.ಹೇಗೆಂದರೆ ನಾವು ಕೂದಲನ್ನು ಕತ್ತರಿಸುತ್ತೇವೆ. ಅದು ಮತ್ತೆ ಬೆಳೆಯುತ್ತದೆ. ನಾವು ಉಗುರನ್ನು ಕತ್ತರಿಸುತ್ತೇವೆ, ಅದು ಮತ್ತೆ ಬೆಳೆಯುತ್ತದೆ. ಬಾವಿಯಿಂದ ನೀರು ಸೇದಿಕೊಳ್ಳುತ್ತೇವೆ, ಅದು ಮತ್ತೆ ಹೆಚ್ಚುತ್ತದೆ. ರಕ್ತ ನೀಡುವುದರಿಂದ ನಿನಗೇನೂ ಕಮ್ಮಿಯಾಗದು, ದಿಟ, ಸಾಯುತ್ತಿರುವವನಿಗೆ ಅವಶ್ಯವಾಗಿ ಹೊಸ ಜೀವನ ಸಿಗುತ್ತದೆ. ಮತ್ತೆ ಇದೂ ಸತ್ಯವೇ-ಏನೆಂದರೆ ಯಾರು ಶರೀರದ ಬಗ್ಗೆ ಅನುರಕ್ತನೋ ಅವನು ರಕ್ತವನ್ನು ಹೇಗೆ ಕೊಡಬಲ್ಲ? ರಕ್ತ-ನೀರಾಗುವ ಮೊದಲು, ಯಾರಿಗಾದರೂ ಜೀವಕೊಡು. ನದಿಯ ನೀರು ಸಮುದ್ರ ಸೇರಿ ಉಪ್ಪು ನೀರಾಗುವ ಮೊದಲು ಹೊಲಗಳಿಗೆ ಹಾಯಿಸು. ಜ್ಞಾಪಕವಿಡು-ಜೀವನಿದ್ದಾಗ ರಕ್ತದಾನ, ಹೋಗುತ್ತ-ಹೋಗುತ್ತ ದೇಹದಾನ ಹೋದ ಮೇಲೆ ನೇತ್ರದಾನ.

-ಮುನಿಶ್ರೀ ತರುಣಸಾಗರ್‌ಜೀ

## ಡಿ.ವಿ.ಜಿ. ಚಿಂತನೆ–164



ನಮ್ಮ ಆಚಾರ ಸಂಪ್ರದಾಯಗಳನ್ನು ನಾವು ಸ್ವತಂತ್ರ ವಿಚಾರಕ್ಕೆ ಒಳಗಾಗಿಸಬೇಕು. ಹೊಸ ಹೊಸ ಸಂದೇಹಗಳು, ದ್ವಂದ್ವಗಳು, ಧರ್ಮ ಸಂಕಟಗಳು- ಇವು ಕಾಲಕ್ರಮದಲ್ಲಿ ಇನ್ನೂ ಹೆಚ್ಚುತ್ತವೆ ; ಒಂದಕ್ಕೆ ನಾಲ್ಕರಷ್ಟಾಗುತ್ತವೆ. ಸಾಹಿತ್ಯಕರ್ತರು ಅವರವರ ಪ್ರತಿಭಾಸಂಪತ್ತಿಗನುಸಾರವಾಗಿ ಇವುಗಳನ್ನೆಲ್ಲ ತಮ್ಮ ಗ್ರಂಥಗಳಲ್ಲಿ ಪ್ರತಿಫಲಿಸುವಂತೆ ಆಗಬೇಕು. ಹಾಗೆ ಹೊಸ ಸಂಶಯಗಳೂ, ಆಶಯಗಳೂ, ಭಾವನೆಗಳೂ, ಸಮಸ್ಯೆಗಳೂ ಸಾಹಿತ್ಯದಲ್ಲಿ ಪ್ರತಿಫಲಿಸಬೇಕಾದರೆ ದೇಶದಲ್ಲಿ ಸ್ವತಂತ್ರವಿಚಾರಬುದ್ಧಿ ಹೆಚ್ಚಬೇಕು.... ಈ ಸ್ವತಂತ್ರ ವಿಚಾರ ಬುದ್ಧಿಯಿಲ್ಲದೆ ಕಾವ್ಯವನ್ನು ಬರೆದರೆ, ಅದು ಹಳಸಲಾಗುತ್ತದೆ; ಬೆಳಗಾಗ ಮಾಡಿಟ್ಟ ಕಾಫಿಯನ್ನು ಸಂಜೆಯಲ್ಲಿ ಬಿಸಿಮಾಡಿ ಕೊಟ್ಟ ಹಾಗಾಗುತ್ತದೆ ; ಹಿಂದಿನ ರಾಮನ ವಿರಹ, ಹಿಂದಿನ ನಳನ ಪಶ್ಚಾತ್ತಾಪ, ಹಿಂದಿನ ಚಂದ್ರಮತಿಯ ಗೋಳು- ಇವನ್ನೇ ನಾವು ಬೇರೆ ಮಾತುಗಳಲ್ಲಿ ಬರೆದಂತೆ ಆಗುತ್ತದೆ.

■ ಡಿ.ವಿ.ಗುಂಡಪ್ಪ (ಕೃತಿ: ''ಜೀವನ ಸೌಂದರ್ಯ ಮತ್ತು ಸಾಹಿತ್ಯ'', 'ಡಿವಿಜಿ ಕೃತಿಶ್ರೇಣಿ-1')

## ರಾಜಕಾರಣಿಗಳು-ಅಧಿಕಾರಿಗಳ ದಿನಚರಿ

| | | |
|---|---|---|
| ಸಂಸದರು | ಎಸ್.ಪಿ.ಮುದ್ದ ಹನುಮೇಗೌಡ | ತುಮಕೂರು |
| ಶಾಸಕರು | ಡಾ.ಎಸ್.ರಫೀಕ್ ಅಹಮದ್ | ತುಮಕೂರು |
| ಶಾಸಕರು | ಬಿ.ಸುರೇಶ್ ಗೌಡ | ಕೇಂದ್ರಸ್ಥಾನ |
| ಜಿಲ್ಲಾಧಿಕಾರಿ | ಕೆ.ಪಿ.ಮೋಹನ್‌ರಾಜ್ | ಕೇಂದ್ರಸ್ಥಾನ |
| ಎಸ್.ಪಿ. | ಡಾ.ದಿವ್ಯಾ ಗೋಪಿನಾಥ್ | ಕೇಂದ್ರ ಸ್ಥಾನ ಇರುವುದಿಲ್ಲ |
| ಸಿ.ಇ.ಒ. | ಕೆ.ಜಿ.ಶಾಂತಾರಾಮ | ತುಮಕೂರು |
| ತಹಸೀಲ್ದಾರ್ | ರಂಗೇಗೌಡ | ಕೇಂದ್ರಸ್ಥಾನ |

## ನಗರದಲ್ಲಿಂದು

■ ಸಂಜೆ 6.30 ಗಂಟೆಗೆ ಎಸ್.ಎಸ್.ಪುರಂ ಒಂದನೇ ತಿರುವಿನ ಶ್ರೀ ಕನ್ನಿಕಾಪರಮೇಶ್ವರಿ ದೇವಾಲಯದಲ್ಲಿ ಧಾರವಾಡದ ಪಂಡಿತ್ ಶ್ರೀ ಕಪಿಲಾಚಾರ್ಯ ಗಲಿಗಲಿ ಅವರಿಂದ ಶ್ರೀ ಹರಿವಂಶ ಪುರಾಣ ಕುರಿತು ಉಪನ್ಯಾಸ.

## ಇಂದು ಸಾಪ್ತಾಹಿಕ ಸತ್ಸಂಗ

ತುಮಕೂರು

ಇಲ್ಲಿನ ಬೆಳಗುಂಬ ರಸ್ತೆಯ ಸಾಯಿಬಾಬಾ ನಗರದ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಡಿಸೆಂಬರ್ 7 ರಂದು ಸಂಜೆ 7 ಗಂಟೆಗೆ 70 ನೇ ಸಾಪ್ತಾಹಿಕ ಸತ್ಸಂಗ ಕಾರ್ಯಕ್ರಮ ಜರುಗಲಿದೆ.

ತುಮಕೂರು ಆದರ್ಶನಗರ ಶಾಖೆಯ ಜ್ಞಾನಬುತ್ತಿ ಸತ್ಸಂಗ ಕೇಂದ್ರದಿಂದ ಆಯೋಜಿತಗೊಂಡಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸತ್ಸಂಗ ಕೇಂದ್ರದ ಅಧ್ಯಕ್ಷ ನಾಡಿಗ್ ರಾಘವೇಂದ್ರ ಪ್ರಸಾದ್ ಬೆಲಗೂರು ವಹಿಸುವರು. ಇದೇ ಸಂದರ್ಭದಲ್ಲಿ ಸಂಗೀತ ಗಾಯಕ ಚಿದಾನಂದ ದೇವರಮನೆ ಅವರು ದಾಸರ ಕೀರ್ತನೆಗಳ ಗಾಯನ ನಡೆಸಿಕೊಡುವರು.

ನೀರು ಅಮೂಲ್ಯ ಮಿತವಾಗಿ ಬಳಸಿ



ಗುಬ್ಬಿ ಪಟ್ಟಣದ ಸುಭಾಷ್ ನಗರದಲ್ಲಿ ಇರುವ ಮಾತೃಸಾಮಾಜಿಕ ಸ್ವಯಂ ಸೇವಾ ಸಂಸ್ಥೆಯ ಕಾರ್ಯದರ್ಶಿಯಾದ ಹೆಚ್.ಹೆಚ್.ಗಿರಿಯಪ್ಪರವರ ಸಾಮಾಜಿಕ ಸೇವೆ ಪರಿಗಣಿಸಿ ನವದೆಹಲಿಯ ಬೆಸ್ಟ್ ಸಿಟಿಜನ್ ಪಬ್ಲಿಸಿಂಗ್ ಹೌಸ್ ವತಿಯಿಂದ ಭಾರತ್ ಜ್ಯೋತಿ ಪುರಸ್ಕಾರ್ ಪ್ರಶಸ್ತಿ ನೀಡಿದ್ದಾರೆ.

## ದಿನ ಭವಿಷ್ಯ



ದಿನಾಂಕ:07-12-2017 ಗುರುವಾರ

ತಿಥಿ: ಚೌತಿ ನಕ್ಷತ್ರ:ಪುಷ್ಯ

ಅದೃಷ್ಟ ಸಂಖ್ಯೆ: 2

ಇಂದಿನ ವಿಶೇಷ

ಮಾರ್ಗಶಿರ ಲಕ್ಷ್ಮೀವ್ರತ

ಮೇಷ : ಹೊಣೆಗಾರಿಕೆ
ವೃಷಭ : ಧಾರಾಳತನ
ಮಿಥುನ : ವಿಶ್ಲೇಷಣೆ
ಕಟಕ : ಅನಾವರಣ
ಸಿಂಹ : ಅತ್ಯಾನಂದ
ಕನ್ಯಾ : ಉಪಚಾರ ಮಾತು
ತುಲಾ :ವೃತ್ತಿಪ್ರಶಂಸೆ
ವೃಶ್ಚಿಕ : ಭರವಸೆ
ಧನಸ್ಸು : ಬಿಗುಮಾನ
ಮಕರ :ಅಪೇಕ್ಷಿತ ಕೆಲಸ
ಕುಂಭ : ಶುಭವಾರ್ತೆ
ಮೀನ : ಮಾನ್ಯತೆ




ಸೆನ್ಸೆಕ್ಸ್:32,597.18 ▼ -205.26
ನಿಫ್ಟಿ : 10,044.10 ▼ -74.15

### ವಿನಿಮಯ ದರ

ಡಾಲರ್ : 64.39 ▲ 0.01
ಪೌಂಡ್ : 86.43 ▼ -0.28
ಯೂರೋ: 76.17 ▼-0.28
ಯೆನ್ : 0.57 ▲ 0.00

# ಡಿ.15: ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ನಿರೀಕ್ಷೆ

ತುಮಕೂರು

ಮುಂಬರುವ ಚುನಾವಣಾ ಅಭ್ಯರ್ಥಿಗಳ ಪಟ್ಟಿಯನ್ನು ಜೆಡಿಎಸ್ ಪಕ್ಷವು ಡಿ.15ಕ್ಕೆ ಬಿಡುಗಡೆ ಮಾಡುವ ನಿರೀಕ್ಷೆ ಇದೆ ಎಂದು ಮಾಜಿ ಶಾಸಕ ಡಿ.ಸಿ ಗೌರಿಶಂಕರ್ ತಿಳಿಸಿದರು.

ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.11ರಂದು ನಗರದ ಸರ್ಕಾರಿ ಜ್ಯೂನಿಯರ್ ಕಾಲೇಜು ಆವರಣದಲ್ಲಿ ನಡೆಯುವ ರಾಜ್ಯಮಟ್ಟದ ಅಲ್ಪಸಂಖ್ಯಾತರ ಸಮಾವೇಶದಲ್ಲಿ ಇತರೆ ಪಕ್ಷದ ಮುಖಂಡರು ಪಕ್ಷಕ್ಕೆ ಸೇರುವ ವಿಶ್ವಾಸದಿಂದ, ರಾಜ್ಯಮಟ್ಟದ ಮುಖಂಡರಲ್ಲಿ ವಿಚಾರ ಚರ್ಚೆ ಮಾಡಲಿದ್ದಾರೆ. ಈ ಸಮಾವೇಶಕ್ಕೆ ಸುಮಾರು ಒಂದೂವರೆ ಲಕ್ಷ ಕಾರ್ಯಕರ್ತರು ಬರುವ ನಿರೀಕ್ಷೆಯಿದ್ದು, ಗ್ರಾಮಾಂತರ ಕ್ಷೇತ್ರದಿಂದ ಬರುವ ಕಾರ್ಯಕರ್ತರಿಗೆ 100 ಬಸ್ಸುಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ತುಮಕೂರು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಸಂಖ್ಯೆ ಹೆಚ್ಚಿಗಿದ್ದು, ಅವರ ಅಭಿವೃದ್ಧಿಗಾಗಿ ರಾಜ್ಯ ಮಟ್ಟದ ಸಮಾವೇಶವನ್ನು ಮಾಡಲಾಗುತ್ತಿದೆ. ಇದರಿಂದ ಅಲ್ಪಸಂಖ್ಯಾತರ ಪ್ರಾಬಲ್ಯವನ್ನು ಹೆಚ್ಚಿಸುತ್ತದೆ. ಗ್ರಾಮಾಂತರದಲ್ಲಿ ಈಗಾಗಲೇ ಮನೆ ಮನೆ ಕುಮಾರಣ್ಣ ಕಾರ್ಯಕ್ರಮ ಯಶಸ್ವಿಯಗಿದ್ದು, 470 ಗ್ರಾಮಗಳಲ್ಲಿ ಕೇವಲ 49 ದಿನಗಳಲ್ಲಿ 220 ಗ್ರಾಮಗಳಿಗೆ ಮನೆ ಮನೆ ಕುಮಾರಣ್ಣ ಕಾರ್ಯಕ್ರಮ ತಲುಪಿದೆ. ಇನ್ನೂ ಕೆಲವೇ ದಿನಗಳಲ್ಲಿ ಎಲ್ಲಾ ಗ್ರಾಮಗಳಿಗೂ ತಲುಪುತ್ತೇವೆ. ಈಗಾಗಲೇ ಶಿರಾ, ಕೊರಟಗೆರೆ ತಾಲ್ಲೂಕುಗಳಲ್ಲಿ ಕಾರ್ಯಕ್ರಮಕ್ಕೆ ಚಾಲನೆ ದೊರೆತಿದೆ. ಹಾಗೆಯೇ ಎಲ್ಲಾ ತಾಲ್ಲೂಕುಗಳಲ್ಲಿಯೂ ಮನೆ ಮನೆ ಕುಮಾರಣ್ಣ ಕಾರ್ಯಕ್ರಮ ಯಶಸ್ವಿಯಾಗಲಿದೆ ಎಂದರು.



ಇತ್ತೀಚೆಗೆ ಪರ್ತಕರ್ತನ ಮೇಲೆ ಹಲ್ಲೆ ನಡೆದಿರುವುದು ಖಂಡನೀಯ. ಜನಪ್ರತಿನಿಧಿಗಳಾಗಿ ಇಂತಹ ಕೃತ್ಯ ವ್ಯಸಗಿರುವುದು ಶೋಚನೀಯ. ಇಂತಹವರ ವಿರುದ್ಧ ತೀವ್ರ ಕ್ರಮ ಕೈಗೊಳ್ಳಬೇಕಾಗಿದೆ. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ನಡೆಯುತ್ತಿರುವ ಕ್ರಷರ್‌ನಿಂದಾಗಿ ನೂರಾರು ಬಡ ಕುಟುಂಬಗಳು ನಾಶವಾಗುತ್ತಿವೆ. ಈ ನಿಟ್ಟಿನಲ್ಲಿ ಗ್ರಾಮಸ್ಥರು ಜಿಲ್ಲಾಧಿಕಾರಿಗೆ ಮನವಿ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

> ಕಳೆದ 20 ವರ್ಷಗಳಿಂದ ಜೆಡಿಎಸ್ ಕೊರಟಗೆರೆ ತಾಲ್ಲೂಕು ಜನರ ನಾಡಿ ಮಿಡಿತದಲ್ಲಿದೆ. ಹೀಗಾಗಿ ಅಲ್ಲಿ ನಮ್ಮ ಗೆಲುವು ನಿಶ್ಚಿತವಾಗಿದೆ. ಜಿಲ್ಲೆಯ 11 ಕ್ಷೇತ್ರಗಳಲ್ಲಿ 8 ರಿಂದ 9 ಕ್ಷೇತ್ರದಲ್ಲಿ ನಮ್ಮದೇ ಗೆಲುವು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಅಧ್ಯಕ್ಷ ಮೊಹಮ್ಮದ್ ಅಲ್ತಾಫ್, ವಕ್ತಾರ ಮಧುಸೂದನ್ ಉಪಸ್ಥಿತರಿದ್ದರು.

# ನಿವೃತ್ತ ನೌಕರರ ಬೇಡಿಕೆ ಈಡೇರಿಕೆಗೆ ಭರವಸೆ

ತುಮಕೂರು

ನಿವೃತ್ತ ನೌಕರರ ಬೇಡಿಕೆಗಳನ್ನು ಪರಿಶೀಲಿಸಿ, ನಂತರ ಈಡೇರಿಸಿಕೊಡಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಭರವಸೆ ನೀಡಿದರು.

ತುಮಕೂರುಜಿಲ್ಲಾನಿವೃತ್ತನೌಕರರಸಂಘದನಿವೃತ್ತರ ಮಹಾಮನೆಯ ಕಟ್ಟಡದಲ್ಲಿ ಎರಡನೇ ಮಹಡಿಯಲ್ಲಿ ನಿರ್ಮಾಣಗೊಂಡಿರುವ ಸಭಾಂಗಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ನಾಗರೀಕರ ಹಾಗೂ ನಿವೃತ್ತ ನೌಕರರಿಗೆ ಸಂಬಂಧಿಸಿದಂತೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲು ತಿಳಿಸಿದ ಅವರು,ಅದಕ್ಕೆ ಪೂರಕವಾದ ಎಲ್ಲಾ ವಿಧವಾದ ಸಹಕಾರವನ್ನು ನೀಡುವುದಾಗಿ ತಿಳಿಸಿದರು.



ಇದಕ್ಕೆ ಅಗತ್ಯವಾದ ಸ್ಥಳಾವಕಾಶ, ಆರ್ಥಿಕ ನೆರವು ಜಿಲ್ಲಾಧಿಕಾರಿಯು ಒಳಗೊಂಡಂತೆ ಸಂಬಂಧಿಸಿದ ಅಧಿಕಾರಿಗಳ ನೆರವನ್ನು ಒದಗಿಸುವುದಾಗಿ ತಿಳಿಸಿದರು.ನಿವೃತ್ತಿ ನಂತರ ಹೆಚ್ಚು ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳುವಂತೆ ತಿಳಿಸಿದರು. ಶಾಸಕ ಡಾ.ಎಸ್.ರಫೀಕ್ ಅಹಮದ್ ನಾಮಫಲಕ ಅನಾವರಣಗೊಳಿಸಿದರು.

## ಇಂದು ಶಾಲಾ ವಾರ್ಷಿಕೋತ್ಸವ

ತುಮಕೂರು

ನಗರದ ಮಲ್ಲಸಂದ್ರದ ಸೇಂಟ್ ಜೋಸೆಫ್ ಇಂಗ್ಲಿಷ್ ಮೀಡಿಯಂ ಶಾಲೆಯ ವತಿಯಿಂದ ಡಿ.7 ರಂದು ಮಧ್ಯಾಹ್ನ 1 ಗಂಟೆಗೆ ಡಾ.ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿದೆ. ಉದ್ಘಾಟನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಸವ ರಾಜಪ್ಪ ಆಪಿನಕಟ್ಟೆ ನೆರವೇರಿಸುವರು. ಅಧ್ಯಕ್ಷತೆಯನ್ನು ಲ್ಯಾನ್ಸಿ ಎಚ್.ಪಾಯ್ಸ್ ಅವರು ವಹಿಸುವರು. ವಿಶೇಷ ಆಹ್ವಾನಿತರಾಗಿ ಸಿ.ಆರ್.ಪಿ.ಎಸ್.ಸಿದ್ದಪ್ಪ ಆಗಮಿಸುವರು.

## ಇಂದು ಸತ್ಸಂಗ ಕಾರ್ಯಕ್ರಮ

ತುಮಕೂರು

ಇಲ್ಲಿನ ಆದರ್ಶನಗರದ ಜ್ಞಾನಬುತ್ತಿ ಸತ್ಸಂಗ ಕೇಂದ್ರದ ವತಿಯಿಂದ 70ನೇ ಸಾಪ್ತಾಹಿಕ ಸತ್ಸಂಗ ಕಾರ್ಯಕ್ರಮವನ್ನು ಡಿ.7ರ ಸಂಜೆ 7 ರಿಂದ 8.15ರವರೆಗೆ ಬೆಳಗುಂಬ ರಸ್ತೆಯ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಏರ್ಪಡಿಸಲಾಗಿದೆ. ಅಧ್ಯಕ್ಷತೆಯನ್ನು ಆದರ್ಶನಗರ ಶಾಖೆ ಅಧ್ಯಕ್ಷ ನಾಡಿಗ್ ರಾಘವೇಂದ್ರ ಪ್ರಸಾದ್ ಬೆಲಗೂರು ವಹಿಸಲಿದ್ದು, ಸಂಗೀತ ಗಾಯಕ ಚಿದಾನಂದದೇವರು ದಾಸರ ಕೀರ್ತನೆಗಳ ಗಾಯನ ಮಾಡುವರು. ಬಿ.ಆರ್.ನಟರಾಜಶೆಟ್ಟಿ, ಪಿ.ಶಾಂತಿಲಾಲ್, ಟಿ.ಮುರಳಿಕೃಷ್ಣಪ್ಪ, ಆರ್. ಬಸವರಾಜಪ್ಪ, ಡಾ. ಆರ್.ಎಲ್. ರಮೇಶ್ ಬಾಬು, ಎನ್.ನಾಗಪ್ಪ, ಅಬ್ಬಿನಹೊಳೆ ಸುರೇಶ್, ಹರಿಪ್ರಸಾದ್ ಅವರುಗಳು ಉಪಸ್ಥಿತರಿರುವರು.

## ಇಂದು ಛಲವಾದಿ ಸಮುದಾಯದ ಪೂರ್ವಭಾವಿ ಸಭೆ

ತುಮಕೂರು

ಛಲವಾದಿ ಮಹಾಸಭಾ, ಶಿರಾ ತಾಲ್ಲೂಕು ಸಮಿತಿ, ಶಿರಾ ಟೌನ್, ಛಲವಾದಿ ಕ್ಷೇಮಾಭಿವೃದ್ಧಿ ಸಂಘ (ರಿ.) ವತಿಯಿಂದ ಡಿ.7ರ ಗುರುವಾರ ಬೆಳಗ್ಗೆ 10-30 ಗಂಟೆಗೆ ಶಿರಾ ನಗರ ಸರ್ಕಾರಿ ನಿವೃತ್ತ ನೌಕರ ಸಭಾ ಭವನ ಅಗ್ನಿಶಾಮಕ ಠಾಣೆ ಪಕ್ಕ, ತಾಲ್ಲೂಕು ಪಂಚಾಯಿತಿ ಎದುರು, ಶಿರಾ ನಗರ ಇಲ್ಲಿ ಛಲವಾದಿ ಸಮುದಾಯದ ವತಿಯಿಂದ ಡಾ|| ಬಿ.ಆರ್. ಅಂಬೇಡ್ಕರ್ ಪರಿನಿರ್ಮಾಣ ದಿನಾಚರಣೆ ಹಾಗೂ ಛಲವಾದಿ ಸಮುದಾಯದ ವತಿಯಿಂದ ಗಣ್ಯರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳುವ ಸಲುವಾಗಿ ಸಮಸ್ತ ತಾಲ್ಲೂಕಿನ ಛಲವಾದಿ ಸಮುದಾಯದ ಬಂಧುಗಳ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ತಾಲ್ಲೂಕಿನ ಛಲವಾದಿ ಜನಾಂಗದ ಖಾಸಗಿ ಸರ್ಕಾರಿ ನೌಕರರು, ಸಂಘದ ಸರ್ಕಾರಿ ನೌಕರರು ಹಾಗೂ ಬಂಧುಗಳು ಆಗಮಿಸಿ ತಮ್ಮ ಸಲಹೆ ಸೂಚನೆ ನೀಡುವುದರೊಂದಿಗೆ ಸಭೆಯಲ್ಲಿ ಚರ್ಚಿಸಲು ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

## ಡಿ.9 ರಿಂದ ಎರಡು ದಿನದ ಕಾರ್ಯಾಗಾರ

ತುಮಕೂರು

ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಅಹಮದಾಬಾದ್ ಹಾಗೂ ಎಂ.ಬಿ.ಎ. ವಿಭಾಗ, ಸಿದ್ದಗಂಗಾ ತಾಂತ್ರಿಕ ಮಹಾವಿದ್ಯಾಲಯದ ಸಹಭಾಗಿತ್ವದಲ್ಲಿ ಅತ್ಯುತ್ತಮ ಗುಣಮಟ್ಟದ ಸಂಶೋಧನೆ ಹೇಗೆ? ಎಂಬ ವಿಷಯದ ಮೇಲೆ ಎರಡು ದಿನಗಳ ಕಾರ್ಯಾಗಾರವನ್ನು ದಿನಾಂಕ 9 ಹಾಗೂ 10 ಡಿಸೆಂಬರ್, 2017 ರಂದು ಎಂ.ಬಿ.ಎ. ವಿಭಾಗದಲ್ಲಿ ಹಮ್ಮಿಕೊಂಡಿದೆ. ಪ್ರೊ. ವಿಶಾಲ್ ಗುಪ್ತ, ಸಹ ಪ್ರಾಧ್ಯಾಪಕರು, ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಅಹಮದಾಬಾದ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ.

ಸುಮಾರು 60 ಸಂಶೋಧನಾ ವಿದ್ಯಾರ್ಥಿಗಳು ದೇಶದ ವಿವಿಧ ವಿದ್ಯಾಸಂಸ್ಥೆಗಳಿಂದ ಭಾಗವಹಿಸಲಿದ್ದು ಕಾರ್ಯಾಗಾರದ ಸದುಪಯೋಗವನ್ನು ಪಡೆಯಲಿದ್ದಾರೆ ಎಂದು ವಿಭಾಗದ ನಿರ್ದೇಶಕರಾದ ಡಾ. ಎಂ.ಆರ್. ಸೊಲ್ಲಾಪುರ್‌ರವರು ತಿಳಿಸಿದ್ದಾರೆ.



ಸೋರೆಕುಂಟೆ ಗ್ರಾಮ ಪಂಚಾಯ್ತಿಯ ಮಲ್ಲೇನಹಳ್ಳಿ ಗೊಲ್ಲರಹಟ್ಟಿಯಲ್ಲಿ ಶ್ರೀ ರಾಮದೇವರ ದೇವಸ್ಥಾನದ ಕಟ್ಟಡದ ಪಾಯಪೂಜೆಯ ಶಂಕುಸ್ಥಾಪನೆಯನ್ನು ಡಿ.ಸಿ.ಗೌರಿಶಂಕರ್ ನೇರವೇರಿಸಿದರು.

# ಕಾನೂನು ಮೀರುತ್ತಿರುವುದು ಸರಿಯಲ್ಲ

ಬರಗೂರು

ಕಾನೂನನ್ನು ಮಾಡಿದ ನಾವುಗಳೇ ಕಾನೂನು ಮೀರುತ್ತಿರುವುದು ಸರಿಯಲ್ಲ, ಸಾರ್ವಜನಿಕರು ಅದನ್ನು ಅರ್ಥೈಸಿಕೊಂಡು ನಡೆದಾಗ ಯಾವುದೇ ಅಪರಾಧಗಳು ಸಂಭವಿಸಲು ಸಾಧ್ಯವಾಗಲಾರದು ಎಂದು ಸಿರಾ ಗ್ರಾಮಾಂತರ ವೃತ್ತ ನಿರೀಕ್ಷಕರಾದ ಸುದರ್ಶನ್ ಹೇಳಿದರು.

ಸಿರಾ ತಾಲ್ಲೂಕು ಬರಗೂರಿನ ಶ್ರೀ ಆಂಜನೇಯಸ್ವಾಮಿ ವಿದ್ಯಾ ಸಂಸ್ಥೆ ಆವರಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಶಿರಾ ಗ್ರಾಮಾಂತರ ಠಾಣೆ ಮತ್ತು ಪಟ್ಟನಾಯಕನಹಳ್ಳಿ ಪೊಲೀಸ್ ಠಾಣೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ-2017ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಳನ್ನು ತನ್ನ ಕುಟುಂಬ ಹಾಗೂ ಬೇರೆಯವರಿಗೆ ಮಾಹಿತಿ ತಿಳಿಸಲು ಅನುಕೂಲಕರವಾಗುವ ಹಾಗೂ ಅಪರಾಧ ಚಟುವಟಿಕೆಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಸಂಭವಿಸುತ್ತಿರುವ ಕಾರಣ ಗ್ರಾಮೀಣ ಶಾಲೆಗಳಲ್ಲಿಯೇ ಹೆಚ್ಚಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಹಳ್ಳಿಗಳಲ್ಲಿ ಯಾರೇ ಕಿಡಿಗೇಡಿಗಳು ಹೆಣ್ಣುಮಕ್ಕಳಿಗೆ ತೊಂದರೆ ಕೊಡುವುದಾಗಲಿ, ಗ್ರಾಮದಲ್ಲಿ ಅಪರಿಚಿತ ವ್ಯಕ್ತಿಗಳು ಕಂಡು ಬಂದಾಗ ಅವರ ಮೇಲೆ ನಿಗಾ ಇರಿಸುವುದು ಅತ್ಯವಶ್ಯಕ. ಪ್ರಜ್ಞಾವಂತ ವಿದ್ಯಾರ್ಥಿಗಳಾದ ನೀವುಗಳು ಅಪರಾಧಗಳ ಸುಳಿವು ನೀಡಿದಲ್ಲಿ ದುರ್ಘಟನೆಗಳನ್ನು ತಡೆಯಲು ಸಾಧ್ಯವಾಗುತ್ತದೆ. ಈಕಾರ್ಯಾಚರಣೆಯಿಂದ ಬೇರೆಯವರಿಗೆ ತೊಂದರೆ ಕೊಡುವ ಸನ್ನಿವೇಶ ನಮಗಿಲ್ಲ. ಸಾರ್ವಜನಿಕರ ಹಿತ ರಕ್ಷಣೆಗೆ ನಾವು ಬದ್ಧರಾಗಿದ್ದು ನ್ಯಾಯಯುತ ಕರ್ತವ್ಯಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಮಕ್ಕಳ ಪೋಷಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದಾದರೆ ಉತ್ತಮ ವಿದ್ಯಾಭ್ಯಾಸ ನೀಡಿ ಕರ್ತವ್ಯ ನಿಷ್ಠರಾಗಿರಿ ಎಂದರು.



ಪಟ್ಟನಾಯಕನಹಳ್ಳಿ ಪಿಎಸ್‌ಐ ಚಂದ್ರಶೇಖರ್ ಮಾತನಾಡಿ ಅತ್ಯಾಚಾರ ಮಾಡುವುದು ಮಾತ್ರ ಅಪರಾಧ ಎಂದಷ್ಟೇ ಅಲ್ಲಿ ಹೆಣ್ಣು ಮಕ್ಕಳನ್ನು ಕೀಟಲೇ ಮಾಡುವುದು. ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದಾಗಲೀ ಮಾಡಿದರೆ ಅತ್ಯಾಚಾರದಂತಹ ಸಣ್ಣಪುಟ್ಟ ಅಪರಾಧಗಳನ್ನು ಎದುರಿಸಬೇಕಾಗುತ್ತದೆ. 18 ವರ್ಷದ ಒಳಗಿನ ಹೆಣ್ಣುಮಕ್ಕಳು ಹಾಗೂ 21 ವರ್ಷದ ಒಳಗಿನ ಗಂಡು ಮಕ್ಕಳ ಮದುವೆಗೆ ಅವಕಾಶವಿಲ್ಲ. ಅದಕ್ಕೆ ಮುಂದಾದರೂ ಬಾಲ್ಯ ವಿವಾಹ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸುವ ಕಾನುನೂ ಸಹ ಸರ್ಕಾರ ಮಾಡಿದೆ ಎಂದರು.

ಬರಗೂರು ಉಪಪೊಲೀಸ್ ಠಾಣಾ ಎಎಸ್‌ಐ ಮುನಿಯಪ್ಪ, ಶ್ರೀಆಂಜನೇಯಸ್ವಾಮಿ ಪದವಿ ಪೂರ್ವ ಕಾಲೇಜು ಕಾಲೇಜು ಪ್ರಾಂಶುಪಾಲೆ ಎಂ.ವಿಜಯಲಕ್ಷ್ಮಿ,ಬಾಲಕಿರ ಪ್ರೌಢಶಾಲಾ ಮು.ಶಿ.ಗುರುಸಿದ್ದಪ್ಪ,ಬಾಲಕರ ಪ್ರೌಡ ಶಾಲಾ ಮುಖ್ಯಶಿಕ್ಷಕ ಸಣ್ಣನರಸಪ್ಪ, ಉಪನ್ಯಾಸಕರಾದ ಹೆಚ್.ಓಂಕಾರ್, ಜಯ್‌ಪ್ರಕಾಶ್, ನಾಗರಾಜು, ಗೋವಿಂದರಾಜು, ಕೀರ್ತಿಕುಮಾರಿ,ವಿಶ್ವನಾಥ್ ಚಾರ್,ಜಯಣ್ಣ, ಪಾಂಡುರಂಗಪ್ಪ, ಪೊಲೀಸ್ ಪೇದೆಗಳಾದ ಖಾಜಾಹುಸೇನ್, ಯತೀಶ್ ,ಹನುಮಂತಾಚಾರ್,ಜುಂಜಣ್ಣ ಇತರರಿದ್ದರು.

## ಬಯಲಾಚೆಯ ಬದುಕು



74 ಈಚನೂರು ಇಸ್ಮಾಯಿಲ್ ಮೊ:8147575414

### ನೋವು ಅವಮಾನಗಳೆಂಬ ಜಾತ್ರೆಯಲ್ಲಿ ಬೆಂಡು ಬತ್ತಾಸುಗಳ ಗರಿಕೆಯ ಹುಟ್ಟು

ಪ್ರತಿಯೊಬ್ಬರು ಕೂಡ ಜೀವನದಲ್ಲಿ, ಪರೋಕ್ಷವಾಗಿಯೋ, ಅಥವಾ ಪ್ರತ್ಯಕ್ಷವಾಗಿಯೋ ನೋವುಗಳನ್ನು ಅನುಭವಿಸಿರುತ್ತಾರೆ,! ಅನುಭವಿಸುತ್ತಿರುತ್ತಾರೆ, ಇಲ್ಲಿ ನೋವು ಕಾಣಿಸಿದೆ, ಯಾವುದೇ ಸಂಘರ್ಷವಾಗಿಲ್ಲ, ಘಟನೆ ನಡೆದಿಲ್ಲ, ಹಿಂಸೆಯಾಗದೆ, ಹೊಸ ತಾತ್ವಿಕತೆ ರೂಪಗೊಂಡಿಲ್ಲ ಹಿಂಸೆಯ ಗರ್ಭದಿಂದ ಅಹಿಂಸೆಯ ಜನನವಾಗಿದೆ. ಆ ಮೂಲಕ ಕ್ರಿಯೆ ಅನುಭವಕ್ಕೆ ಹೊಸ ಪಥ್ಯ ಬರೆದಿದೆ, ಆದ್ದರಿಂದ ನೋವು ಕೂಡ ಒಂದು ಸೃಜನಶೀಲ ಧಾತು ಚಲನಶೀಲ ಆಕೃತಿಗಳಿಗೆ ಸಹಕಾರಿಯಾಗುತ್ತದೆ, ಆ ಮೂಲಕ ಭಾಷೆ, ಸಂಸ್ಕೃತಿ, ಇತಿಹಾಸ, ರಾಜಕೀಯಕ್ಕೆ ಚಾಲನೆ ಕೊಡುತ್ತದೆ, ಇಲ್ಲಿ ಪ್ರತಿಯೊಂದು ವಸ್ತು ಕೂಡ ನೋವಿಗೆ ತನ್ನ ಕೊರಳನ್ನು ಒಡ್ಡಿಕೊಂಡಿರುತ್ತದೆ, ಮರುಹುಟ್ಟು ಪಡೆದುಕೊಳ್ಳುವ ಸಂಭ್ರಮದಲ್ಲಿ ಮತ್ತೆ ಮತ್ತೆ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ, ನೋವು ಅದು ದೈಹಿಕವೂ ಆಗಬಹುದು, ಮಾನಸಿಕ ನೋವು ಆಗಬಹುದು ದೈಹಿಕ ನೋವು ಶರೀರಕ್ಕೆ ಸಂಬಂಧಪಟ್ಟದ್ದಾದರೆ ಮನಸ್ಸಿಗೆ ಸಂಬಂಧಪಟ್ಟದ್ದು ಮಾನಸಿಕ ನೋವು. ಶರೀರದ ನೋವು ಅನೇಕ ರೀತಿಯಲ್ಲಿ ಅನೇಕ ವಿಧದಲ್ಲಿ ಕಾಣಬಹುದು ಕಾಣದ ಈ ಗಾಳಿಯಲ್ಲಿ ಅನುಭವಿಸಿದವರ ಪಾಡು ವರ್ಣಾತೀತ ಎರಡು ನೋವು ಕೂಡ ಅನುಭವದ ಧಾತು ಶರೀರದ ಆಧ್ಯಾತ್ಮ ಮನಸ್ಸಿಗೆ ನೋವಾದರೆ ಹಿಂಸೆಯ ಧ್ವನಿ ತಂಗಗಳು ನರಮಂಡಲವನ್ನು ಘಾಸಿಮಾಡುತ್ತದೆ, ಸಾಮಾಜಿಕ ವಲಯದಲ್ಲಿರುವ ಆಚರಣೆಯ ವಿನ್ಯಾಸ ಕ್ರಮದಲ್ಲಿ ಜಾತಿಯ ಚೌಕಟ್ಟಿನಲ್ಲಿ ಅಭಿವ್ಯಕ್ತಿಸಿರುವ ರೀತಿ, ಹಿಂಸೆಗೆ ತಾರತಮ್ಯಕ್ಕೆ ಮನುಷ್ಯ ಸಂಬಂಧದ ಗೆರೆಗಳಿಗೆ ಕಾರಣ ಕೊಡುತ್ತಾ ಜನಸಮುದಾಯದಲ್ಲಿ ಭಿನ್ನತೆ, ಪರಸ್ಪರ ಅಪನಂಬಿಕೆ ಮೂಡಿದೆ. ಆ ಪರಸ್ಪರ ಭಿನ್ನತೆ ಮೌಢ್ಯತೆಯಲ್ಲಿ ಶೋಷಣೆ ಮುಂದುವರೆದು ಸಾಮಾಜಿಕ ನ್ಯಾಯಕ್ಕೆ ಹಿನ್ನಡೆಯಾಗಿದೆ. ಸಮುದಾಯದ ಈ ನಡವಳಿಕೆಗಳು ವ್ಯಕ್ತಿಯನ್ನು ಭೌತಿಕ ವಸ್ತುಗಳ ಎದುರು ಅಮೂರ್ತದ ಧ್ಯಾನದ ಹುಟುಕಾಟದಲ್ಲಿ ಎಲ್ಲಾ ಗೋಳುಗಳು ಸುರಳಿಯಾಗಿ ಸುತ್ತುಕೊಂಡಿವೆ, ಆ ಗೋಳುಗಳು ಜನಸಮುದಾಯದ ಪಾಲ್ಗೊಳ್ಳಿಕೆಯಲ್ಲಿ ನುಸುಳಿ, ಒಳಸುಳಿಯಾಗಿ ಕಠೋರ ನಿರ್ಧಾರದಿಂದ ಮನುಷ್ಯ ಮನುಷ್ಯನನ್ನು ಕಡೆಗಣಿಸುವ ವಾತಾವರಣ ನಿರ್ಮಾಣವಾಗಿ ಪ್ರಧಾನಧಾರೆ ತನ್ನ ಪಾಲುದಾರಿಕೆಯನ್ನು ಅರ್ಥೈಸುವ ನಿಟ್ಟಿನಲ್ಲಿ ಅವಮಾನಗಳು ಪ್ರಕಟಗೊಂಡಿವೆ. ಪ್ರಾಣಿಗಳಲ್ಲಿ ಕಾಣದ ಈ ಬಾಧೆ ಮೆದುಳು ಪಡೆದುಕೊಂಡಿರುವ ಮನುಷ್ಯ ಷರಾ ಬರೆದುಕೊಂಡಿದ್ದಾನೆ, ಜಗತ್ತಿನಾದ್ಯಂತ ಶೇ60 ಜನಸಮುದಾಯಗಳು, ಅವಮಾನಗಳ ದಳ್ಳುರಿಯನ್ನು ಅನುಭವಿಸಿದ್ದಾರೆ, ಅವಮಾನಗಳು ನಾನಾ ವಿಧದಲ್ಲಿ ಪ್ರಕಟಗೊಂಡಿವೆ ಜಾತಿ, ವರ್ಗ, ವರ್ಣ, ಬಣ್ಣದಿಂದ ಪ್ರತ್ಯೇಕಿಸಿದ್ದಾರೆ, ಬಿಳಿಯ ಕರಿಯನ್ನು ಮೇಲ್ವರ್ಗ ಕೆಳವರ್ಗದವರನ್ನು ಧರ್ಮಾಂಧತೆಯ ತೆಕ್ಕೆಯೊಳಗೆ ಆಧ್ಯಾತ್ಮದ ವಿಷಯದಲ್ಲೂ ಅವಮಾನಿಸಲಾಗಿದೆ ಅವಮಾನಗಳ ಹುಟ್ಟಿಗೆ ವ್ಯಕ್ತಿಯ ಹುಟ್ಟೇ ಕಾರಣವೆಂದು ತಿಳಿದಿರುವ ಜಗತ್ತಿನಲ್ಲಿ ಎಂತಹ ಅರಿವು ಕೂಡ ಗೌಣ? ಸಾಮಾಜಿಕ ನ್ಯಾಯದ ಸಂಘರ್ಷ ಶತಶತಮಾನದಿಂದ ಮುಂದುವರಿದಿದೆ, ಸಮಾನತೆಗಾಗಿ, ಎಲ್ಲರ ಬಾಳನ್ನು ಹಸನು ಮಾಡುವಂತಹ ವ್ಯಕ್ತಿಗಳು ತಮ್ಮ ಪ್ರಾಣವನು ತೆತ್ತರೂ ಅಸಮಾನತೆ ಇಂದಿಗೂ ಉಳಿದಿದೆ, ಹೊಸ ಶತಮಾನದಲ್ಲೂ ಜ್ವಲಂತವಾಗಿ ಕಾಡಿವೆ ಅವಮಾನದ ಮೂಲ ಕಾರಣಗಳನ್ನು ಹುಡುಕುವ ನಿಟ್ಟಿನಲ್ಲಿ ನಮ್ಮೆಲ್ಲರ ಸೈದ್ಧಾಂತಿಕ ಹೋರಾಟ ಮುಂದುವರೆಯಬೇಕು, ಸಾಮಾಜಿಕ ವಲಯದಲ್ಲಿ ಬಡತನ, ಜಾತಿಪದ್ಧತಿ, ವರದಕ್ಷಿಣೆ, ಜ್ಞಾನದಂತಹ ವಿಷಯಗಳಲ್ಲಿ ತಾರತಮ್ಯ ಉಂಟಾಗಿರುವುದರಿಂದ ಕೆಳವರ್ಗದ ಜನ ಅವಮಾನಗಳನ್ನು ಉಂಡು ಮಲಗಿದರೆ ಜಾಸ್ತಿ, ಹಾಗೆ ಅವಮಾನಗಳನ್ನು ಎದುರು ಧೈರ್ಯವಾಗಿ ಹೋರಾಡಿದವರು. ನಮ್ಮ ಕಣ್ಣು ಮುಂದೆಯೇ ನಡೆದಿದ್ದಾರೆ? ಜೀವನದಲ್ಲಿ ನೋವು ಅವಮಾನಗಳು ಧೈರ್ಯವಾಗಿ ಸ್ವೀಕರಿಸಬೇಕು ಅದು ನಮ್ಮ ಜೀವನದ ತಾತ್ವಿಕತೆಗೆ ಸಂವೇದನೆಗೆ ಗಟ್ಟಿ ನಿಲುವು ಕೊಡುತ್ತದೆ, ಆದರೆ ಅದೊಂದು ವೇದಿಕೆಯ ನುಡಿಮುತ್ತಾಗಬಾರದು, ಆದೇಶವಾಗಬಾರದು ಆದರೆ ಅದು ಅಷ್ಟು ಸುಲಭದ ಮಾತಲ್ಲ, ಅನುಭವಿಸಿದವರಿಗೆ ಮಾತ್ರ ಅದರ ಪಾತದ ವಿಷಾದ ಆರ್ದ್ರತೆ ಸಂಕಟ ತಳಮಳದ ಅರಿವು ತಿಳಿದಿರುತ್ತದೆ, ಶ್ರೇಷ್ಠತೆಯ ಹೆಸರಿನಲ್ಲಿ ಹೊಸ ಚಿಗುರನ್ನು ಚಿವುಟಬಾರದು,

ಆ ಮನಸ್ಸುಗಳು ಭೌತಿಕ ಕಸರತ್ತಿನ ಜಂಜಾಟದಲ್ಲಿ ಅರಿವಿನ ದ್ವಂದ್ವದಲ್ಲಿ ನೆಮ್ಮದಿ ತಾಣಕ್ಕಾಗಿ ಹಂಬಲಿಸುವವರು, ಜೀವನದಲ್ಲಿ ನೋವು ಅವಮಾನಗಳನ್ನು, ಸಂತೋಷಗಳನ್ನು ಗಟ್ಟಿಯಾಗಿ ಸ್ವೀಕರಿಸಿ ಸವಾಲುಗಳ ಜೊತೆ ಮುಖಾಮುಖಿಯಾಗಿದ್ದಾರೆ, ಅವಮಾನಗಳು ವ್ಯಕ್ತಿತ್ವವನ್ನೇ ದಹಿಸಿಬಿಡಬಹುದು. ಹಾಗೆ ಅವಮಾನಗಳ ಉಂಡ ಮನಸ್ಸುಗಳು ಸಮಾಜಕ್ಕೆ ಹೊಸ ಭಾಷ್ಯ ಕೂಡ ಬರೆದಿದ್ದಾರೆ. ಗಾಂಧೀಜಿ, ನೆಲ್ಸನ್ ಮಂಡೇಲಾ, ಲಿಂಕನ್, ಸೂಕಿ, ಅಂಬೇಡ್ಕರ್, ತಮಗೆ ದೊರೆತ ನೋವು ಅವಮಾನಗಳನ್ನು ಸಮಾಜ ಪ್ರತ್ಯಯದೊಂದಿಗೆ ಹೋರಾಡಿ ಗಟ್ಟಿ ಪ್ರತಿಪಾದನೆಗೆ ಸಮಾನತೆಯ ತಳಹದಿ ಹಾಕಿ ಇತಿಹಾಸವಾಗಿದ್ದಾರೆ, ಜಾತಿಯಿಂದ ಅವಮಾನಗೊಂಡ ಮನಸ್ಸುಗಳೇ ಭಾಷೆ, ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮಕ್ಕೆ ತಮ್ಮ ಅತಿ ಮುಖ್ಯ ಕಾಣ್ಕೆ ಕೊಟ್ಟು ಬಹುರೂಪಿ ಕಾಯಕ್ಕೆ ದೀಪ ಹಚ್ಚಿದ್ದಾರೆ, ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರತಿ ಹಂತದಲ್ಲೂ ಅವಮಾನ ಮಾಡಿಸಲು ಸೋಗಲಾಡಿಗಳು, ಜಾತಿವಾದಿಗಳು ಬಚ್ಚಿಟ್ಟುಕೊಂಡವರು ಸದಾ ಜಾತಕ ಪಕ್ಷಿಯಂತೆ ಕಾದಿರುತ್ತಾರೆ ಅವರು ಮಾತಲ್ಲಿ ಮಾತಿಲ್ಲದವರು. ಅದು ಎಲ್ಲಾ ಕಾಲಕ್ಕೂ ಸಲ್ಲಿದೆ ಜೀವನ ಎಲ್ಲಾ ಶಾಖೆಗಳ ಸಂಗಮ. ಅವಮಾನಗಳ ಜಾತ್ರೆಯಲ್ಲಿ ಏಕಲವ್ಯನ ಧ್ಯಾನಸ್ಥ ಪ್ರತಿಮೆಯಾಗಿ ನಮ್ಮ ಅರ್ಥೈಸುವಿಕೆಯಲ್ಲಿ ಕುವೆಂಪುರವರ ಮಹತ್ವಾಕಾಂಕ್ಷೆಯ ಛಲ ಚಿಗುರೊಡೆಯಲಿ. ಅಕ್ಷರಗಳು ಹೊಸ ಹುಟ್ಟಿನ ಗುಹೇಶ್ವರಕ್ಕೆ ಕಾರಣವಾಗಲಿ, ಮಾನವೀಯ ಮೌಲ್ಯದ ಪ್ರತಿಸ್ಪಂದನೆಗೆ ಮೊದಲ ಪ್ರಾಶಸ್ತ್ಯ ಸಿಗಲಿ, ಬದುಕಿನ ಸುಂದರತೆಯನ್ನು, ಅಖಂಡತೆಯನ್ನು, ನಾವೀನ್ಯತೆಯನ್ನು, ನಾಟಕೀಯತೆಯನ್ನು, ಅರ್ಥಪೂರ್ಣವಾಗಿ ಅನುಭವಿಸಬೇಕು.


ತುಮಕೂರು ಮಹಾನಗರ ಪಾಲಿಕೆ
ದೂ: 2278480, ಫ್ಯಾಕ್ಸ್: 2275106
ಇ-ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.gov.in
ನಂ.: ತುಮಪಾ/ತಾಂಶಾ/ಪಾಲಿಕೆ ನಿಧಿ/ಆರ್/655/2017-18
ದಿನಾಂಕ: 23.11.2017

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ ಅನುದಾನದಲ್ಲಿ 01 ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumkurcity.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

(1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 24.11.2017ರಿಂದ 26.12.2017ರವರೆಗೆ. (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.12.2017ರಂದು ಸಾಯಂಕಾಲ 4.30 ಗಂಟೆವರೆಗೆ. (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 27.12.2017ರ ಸಾಯಂಕಾಲ 4.45 ಗಂಟೆ ನಂತರ. (4) ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು.

| ಕ್ರ ಸಂ. | ಕಾಮಗಾರಿಯ ವಿವರ | ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ತುಮಕೂರು ನಗರದ ವಾರ್ಡ್ ನಂ.18ರ ಉಪ್ಪಾರಹಳ್ಳಿ ಅಂಡರ್‌ಪಾಸ್‌ಗೆ ತೆರಳುವ ಮಾರ್ಗದಲ್ಲಿ ಅಪ್ರೋಚ್ ರಸ್ತೆಗೆ ತಡೆಗೋಡೆ ನಿರ್ಮಿಸುವ ಕಾಮಗಾರಿ | 2.30 | 5750.00 |

ಸಹಿ/- (ಹೆಚ್. ರವಿಕುಮಾರ್) ಮಹಾಪೌರರು, ಮಹಾನಗರ ಪಾಲಿಕೆ, ತುಮಕೂರು
ಸಹಿ/- (ಫರ್‌ಜಾನಖಾನಂ) ಉಪಮಹಾಪೌರರು ಮಹಾನಗರ ಪಾಲಿಕೆ, ತುಮಕೂರು
ಸಹಿ/- (ವಿಜಯ ರುದ್ರೇಶ್) ನಗರ ಯೋಜನಾ ಮತ್ತು ಸ್ಥಾಯಿ ಸಮಿತಿ ಮಹಾನಗರ ಪಾಲಿಕೆ, ತುಮಕೂರು
ಸಹಿ/- (ಮಂಜುನಾಥಸ್ವಾಮಿ ಎಲ್.) ಕೆ.ಎಂ.ಎ.ಎಸ್. ಆಯುಕ್ತರು, ಮಹಾನಗರ ಪಾಲಿಕೆ, ತುಮಕೂರು

ವಾ.ಸಾ.ಇ./ ತುಮಕೂರು/ 02/ ಎಂಸಿಎ/ 2017-18